# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

॥धर्मो रक्षति रक्षितः॥

Vol. XXXI No. 7 | MAY 2022 | Pages 16 | Rs. 2/-




## AGM HELD ON 26TH MARCH 2022


PAGE DONATED BY : PROFESSIONAL COURIERS WESTERN & CENTRAL REGION, COURTESY : SHRI RAMESH G. HEGDE, MADAPPAN, KARKI, DADAR T. T.

**"Havyaka Sandesha"** is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098 ✆ 2665 2591

**Hon. Editor** : Smt. Amita S. Bhagwat

**Editorial Committee** Smt. Shashikala Hegde
Smt. Tanuja Hegde
Shri Umesh Hegde
Smt. Shailaja Hegde

**Publisher** : Narayan Akadas R.
Hon. Gen. Secretary

**Printed at** : M/s. Navin Printers
Mumbai - 400 016.
✆ 2430 8316

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2019-2020**

| | | |
|---|---|---|
| *President* | : | Shivkumar P. Bhagwat |
| *Vice - President* | : | Sanjay Bhat |
| *Hon. Gen. Secretary* | : | Narayan Akadas |
| *Hon. Jt. Secretary* | : | Umesh Hegde |
| *Hon. Treasurer* | : | A. G. Bhat |

***Elected Members :***

| | |
|---|---|
| Smt. Tanuja Hegde | A. K. Bhat |
| Smt. Shashikala Hegde | R. N. Kameshwar |
| N. K. Hegde | Ramesh Vaidya |
| Gautam Upadhya | Chidanand Bhagwat |

***Co-opted Members :***
Umesh Maskeri, Shailaja Hegde

***Editorial***

# What not to do



*A child sees the world with bewilderment. Chirping birds, blooming flowers, changing colors of the sky never stop to arouse it's curiosity. Looking at the child, we never see a dull moment, and are amazed by its energy level, as when it is stopped from doing something, it will switch over to some other activity. With the bunch of things to do, it feels not only the world is large but also beautiful.*

*Life becomes restrictive, once the child has grown up and has attained adulthood. A time comes when one has to decide the profession/vocation he/she wants to pursue and has to choose the course accordingly. This major decision of life involves different factors to be considered. In today's scenario one does not choose a career just because he likes doing that particular job. Different factors like its viability, future prospects, income etc. are at play while taking decision, as people are more concerned about the standard of living. Social norms also influence the decision making. However when you speak about the quality of life it necessarily imbibes loving your work. There can be a dilemma when some have varied interests and different types of work entice them. In such cases deciding to choose anyone field of interest includes deciding not to do some other things, which one would be happily doing.*

*We also find some people who are very creative and capable of shining in different form of arts like singing, writing, dancing, drawing, sculpting etc. However, if a person tries to express himself in all forms of art, it is quite obvious that he may not be in a position to excel in any one field. Jack of all trades but master of none, an old proverb, means much more, in these days of specialization.*

*Excellence always needs total dedication. If a person is always multitasking, his energy flows into multiple channels and therefore the undercurrent may not be strong. Experience is acquired by repeated work which requires giving time. Life is nothing but the management of time and energy coupled with love.*

*It does not mean that one should be always doing the same work all the time, to such an extent, he may feel that life has become mundane. Taking occasional break, developing some hobbies are required to rejuvenate oneself. However it is very important to know where the focus of our life is.*

*It is a known fact that those who want to climb Mount Everest tend to overlook other small mountains around.*

Amita S Bhagwat

e-mail : amitabhagwat@gmail.com

*PAGE DONATED BY : **SHRI SADANANDA HEGDEKATTE MOODABIDIRE & FAMILY IN THE MEMORY OF HIS FATHER LATE V. V. HEGDEKATTE***

# *From The President's Desk*

Dear Friends,

**"When a man who understands the self has become all things**
**What sorrow what trouble can be there to whom who beholds that unity**

Isha Upanishad, Hymns



Isha Upanishad upholds the essence of Indian philosophy where there is no difference between you and others, there is no reason to be happy or unhappy as our happiness or sorrow is not different from that of the Universe. The feeling of oneness has inspired men to come together and hold each other's hand, extend friendship and help each other.

In the last two years, as the pandemic had gripped us in fear, we have undergone a lot of pain. The loss of lives of some of the members was really pathetic. Some have lost their dear relatives and friends which is very sad. Life was in doldrums. We have realized how fragile the human life is and at the same time how valuable it is. It is said with great pain comes great strength. Today, we are strong in the sense that we know how important our life is. We want to work harder and serve better.

True, during pandemic, cultural and other regular programs of the Trust could not be held. Our committee meetings, during the lock down, were held regularly through zoom. The Women Wing of the trust played an important role in disbursing educational aid of Rs. 3,04,000/- amongst 39 students of Mumbai and rural parts of Karnataka.

We are thankful to our donors who have been of great help to us in fulfilling the objective of our Trust of giving medical and educational aid to the needy and deserving. We acknowledge our gratitude to Shri Subray Hosmane for donating Rs. 5,00,000/-, Shri Ramesh Bhat, Halkar for donating Rs. 2,00,000/- and Smt. Savita Rao for donating Rs. 2,00,000/- towards educational aid. Shri Ramesh Bhat and Smt. Savita Rao are practically donating each year to the Trust. The Trust also gave aid to those families who suffered due to reduction in the income due to lock down.

As you all know we have rented out Ghatkopar Hall to Awaz Company. They had informed us in February 2020 that they do not want to renew the Agreement as their business is going down. They also gave a letter in April 2020 that due to the lock down they are vacating. We requested them to continue for some months. We also gave an Advertisement in February 2020 inviting any party to run the hall. Unfortunately there was no positive response. We were told by Awaz Company that they will maintain the hall till June 2020 and they will quit thereafter. Had they quitted, the Trust had to spend the money towards its maintenance. We had hoped that the position will improve and persuaded them to continue. They reluctantly agreed on a condition that they would pay us Rs. 6000/- per bookings and would continue maintaining it. Even now they have told us that they want to vacate. Hence, we are trying to find a solution in this regard.

Even at Dhyan Mandir, Dombivili we had an Agreement with Shubham Karoti who were running tuition classes for students. They have also told that due to lock down, they could not run classes and not generating the finance and have expressed to vacate. Unfortunately, the steady income of the Trust is being reduced to a major extent. We have to take a practical view in the best interest of the Trust.

As you are aware our A.G.M. was held on 26.3.2022. We have decided to start our yearly programs. We will keep you informed of the same.

Once again expecting support and co-operation from one and all.

With Regards,

**S. P. BHAGWAT**
**President**

*PAGE DONATED BY : **HEGDE HOSPITAL, CHEMBUR,** COURTESY : **DR. DINESH HEGDE***

# ಮಾಸ ಮಹಾತ್ಮ್ಯೆ

✍ ಗಣಪತಿ ಭಡ್ತಿ

*(ಕಳೆದ ಸಂಚಿಕೆಯಿಂದ)*

ಸೂರ್ಯಲೋಕದ ಹಾಗೂ ಸೂರ್ಯನ ವರ್ಣನೆಗಳು ವೇದಗಳಲ್ಲಿ ಯಾವ ಪ್ರಕಾರದಿಂದಿರುವವೋ ಅದೇ ರೀತಿಯಿಂದ ಪುರಾಣಗಳಲ್ಲಿ ವೈಕುಂಠದ ಹಾಗೂ ವಿಷ್ಣುವಿನ ವರ್ಣನೆಗಳಿದ್ದು ಸೂರ್ಯನು ತನ್ನ ಉದಯ ಮಧ್ಯ ಅಸ್ತಗಳೆಂಬ ಮೂರು ಪದಗಳಿಂದ ಜಗತ್ತನ್ನೆಲ್ಲ ವ್ಯಾಪಿಸುವನು; ಎಂದಿರುವ ವೇದವಚನಾನುಸಾರವಾಗಿಯೇ ವಾಮನಾವತಾರದ ಕಥೆಯು ಉಂಟಾಯಿತೆಂದು ಕೆಲವರ ಪ್ರತಿಪಾದನೆಯಿದೆ. ಒಟ್ಟಿನ ಮೇಲೆ ವೇದಕಾಲದಲ್ಲಿ ಮುಖ್ಯ ಆರಾಧ್ಯ ದೈವತವಾದ ಸೂರ್ಯನೇ ಪುರಾಣಕಾಲದಲ್ಲಿ ವಿಷ್ಣುವೆಂಬ ಹೆಸರಿನಿಂದ ಆರಾಧ್ಯನಾದನು. ಸೂರ್ಯನು ಸಕಲ ಸ್ಥಿರ, ಚರಸೃಷ್ಟಿಯ ಪಾಲಕನೆಂಬುದು ಪ್ರಸಿದ್ಧವೇ ಸರಿ. ಅಂದ ಮೇಲೆ ಈ ಪಾಲನಶಕ್ತಿಯು ವಿಷ್ಣುವಿನಲ್ಲಿರುವದೆಂದೂ, ಆಯಾಯ ಕಾಲಕ್ಕೆ ಧರ್ಮಪರಿಪಾಲನ ಮಾಡಿದ ಪ್ರಭಾವಶಾಲಿಗಳಾದವರು ವಿಷ್ಣುವಿನ ಅವತಾರಗಳೆಂದೂ ತಿಳಿಯುವದು ಸಹಜವೇ ಸರಿ.

ಶ್ರೀವಿಷ್ಣುವಿನ ದಶಾವತಾರಗಳಲ್ಲದೆ ವೇದವ್ಯಾಸ, ಹಯಗ್ರೀವರೂ ವಿಷ್ಣುವಿನ ಅವತಾರಗಳೇ ಎಂದು ತಿಳಿಯಲ್ಪಟ್ಟಿರುವರು. ಇದಲ್ಲದೆ ಸಾಂಖ್ಯಶಾಸ್ತ್ರದ ಉತ್ಪಾದಕನಾದ ಕಪಿಲನೂ, ಆಯುರ್ವೇದದ ಉತ್ಪಾದಕ ನಾದ ಧನ್ವಂತರಿಯೂ, ಬದರಿಕಾಶ್ರಮದಲ್ಲಿ ತಪಶ್ಚರ್ಯ ಮಾಡುತ್ತಿರುವ ನರನಾರಾಯಣರೂ, ಈ ಭೂಮಿಗೆ ಯಾವನಿಂದ ಪೃಥ್ವೀ ಎಂಬ ಹೆಸರುಂಟಾಯಿತೋ ಆ ಪೃಥುರಾಜನೂ ವಿಷ್ಣುವಿನ ಅವತಾರಗಳೆಂದೂ ಹೇಳಿರುತ್ತದೆ. ಆದರೆ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ, ಕಲ್ಕಿ ಈ ದಶಾವತಾರಗಳೇ ಮುಖ್ಯವಾಗೆಣಿಸಲ್ಪಡುತ್ತವೆ.

ಈ ಅವತಾರಕ್ರಮವು ಉತ್ಕ್ರಾಂತಿ ತತ್ವಕ್ಕನುಸರಿಸಿರುವದಾಗಿ ಕೆಲವರ ಅಭಿಪ್ರಾಯವಿರುತ್ತದೆ. ಮಹಾಪ್ರಲಯಕ್ಕೂ, ಮತ್ಸ್ಯಾವತಾರಕ್ಕೂ ಸಂಬಂಧವು ಪುರಾಣಗಳಲ್ಲಿ ಹೇಳಲ್ಪಟ್ಟಿದ್ದೇ ಅದೆ. ಇಂಥ ಮಹಾಪ್ರಲಯವನ್ನು ಕ್ರಿಸ್ತಿಯನ್ನರೂ ಮಹಮ್ಮದೀಯರೂ ಒಡಂಬಡುತ್ತಾರೆ. ಈ ಮತ್ಸ್ಯವು ಹಸ್ತಪಾದಾದಿಗಳಿಲ್ಲದ ಸುಲಭ ಶರೀರ ರಚನೆಯುಳ್ಳ ಆರಂಭದ ಸೃಷ್ಟಿಯು. ಈ ಮುಂದಿನ ಕೂರ್ಮಾವತಾರವು ಬೆನ್ನಿನ ಕವಚವೂ ಕಾಲೂ ಉಳ್ಳ ಸ್ವಲ್ಪ ಸುಧಾರಿಸಿದ ರೂಪವಿದ್ದು ಉತ್ಕ್ರಾಂತಿ ತತ್ವಕ್ಕನುಸರಿಸಿದ ಉತ್ಪತ್ತಿಯನ್ನು ವ್ಯಕ್ತಪಡಿಸುತ್ತದೆ. ವರಾಹವು ಚತುಷ್ಪಾದ ಪಶುವು. ಇದು ಇನ್ನೂ ಹೆಚ್ಚು ಸುಧಾರಿಸಿದ ಶರೀರ ರಚನೆಯದೆಂಬುದು ಸ್ಪಷ್ಟವು. ನೃಸಿಂಹವು ಪಶು ಹಾಗೂ ಮನುಷ್ಯರೂಪಗಳ ಮಿಶ್ರಣದ ಶರೀರ ರಚನೆಯದು. ವಾಮನನು ಇನ್ನೂ ಅಪೂರ್ಣ ಶರೀರ ರಚನೆಯ ಮನುಷ್ಯನ ಉತ್ಪತ್ತಿಯ ಪ್ರಾರಂಭದ ಅವತಾರವು. ಪರಶುರಾಮನು ಮನುಷ್ಯರಲ್ಲಿ ಸುಧಾರಿಸಿದ ಶರೀರ ರಚನೆಯ ಬಲವಂತ ವ್ಯಕ್ತಿಯಾಗಿದ್ದರೂ ಇದು ತಾಮಸೀವೃತ್ತಿ ದ್ಯೋತಕವಿರುತ್ತದೆ. ರಾಮನು ಸರಳ ಸಾತ್ವಿಕವೃತ್ತಿಯ ರೂಪಾಂತರದ ದರ್ಶಕವು. ಕೃಷ್ಣನು ನಿಷ್ಕಾಮ ಕರ್ಮಮಾಡುವ ತತ್ವವನ್ನು ಉಪದೇಶಿಸುವ ವ್ಯವಹಾರ ಚತುರತೆಯ ಬದಲಾವಣೆಯ ದ್ಯೋತಕವು. ಬುದ್ಧನು ಪರೋಪಕಾರವೇ ಮುಖ್ಯ ಧ್ಯೇಯವಾಗಿರಬೇಕೆಂಬ ಉದಾತ್ತ ಭಾವನೆಯನ್ನು ಜನರಲ್ಲಿ ಹಬ್ಬಿಸುವ ರೂಪಾಂತರವಾಗಿದೆ. ಈ ಪ್ರಕಾರ ಉತ್ಕ್ರಾಂತಿವಾದಿಗಳು ಅವತಾರಗಳ ಕ್ರಮವು ತಮ್ಮ ಮತಕ್ಕನುಸರಿಸಿರುವುದೆಂದು ಹೇಳುತ್ತಾರೆ.



ವೈಷ್ಣವ ಧರ್ಮವು ಬಹು ಅನಾದಿಕಾಲದಿಂದ ಪ್ರಚಾರದಲ್ಲಿತ್ತು. ಮಹಾಭಾರತದಲ್ಲಿ ಭೀಷ್ಮನು ಧರ್ಮರಾಜನಿಗೆ ವಿಷ್ಣುವಿನ ಮಾಹಾತ್ಮ್ಯವನ್ನು ಉಪದೇಶಿಸಿದ್ದಾನೆ. ಆ ಕಾಲಕ್ಕೆ ವಿಷ್ಣುಭಕ್ತರಿಗೆ ಭಾಗವತರೆಂದು ಹೇಳುವ ಸಾಂಪ್ರದಾಯವಿದ್ದಂತೆ ಕಂಡು ಬರುತ್ತದೆ. ಇದರಿಂದಲೇ ಭಾಗವತ ಸಾಂಪ್ರದಾಯವೆಂದು ರೂಢವಾಗಿರಬೇಕು. ಈ ಭಾಗವತ ಧರ್ಮವೇ ಮುಂದೆ ಪುರಾಣಕಾಲದಲ್ಲಿ ವೈಷ್ಣವಧರ್ಮವೆಂಬ ಹೆಸರಿನಿಂದ ವ್ಯವಹರಿಸಲ್ಪಡ ಹತ್ತಿತು. ಈ ಧರ್ಮದ ಮೂಲಸಿದ್ಧಾಂತ ಗ್ರಂಥವು ನಾರದ ಪಂಚರಾತ್ರವೆಂಬುದು. ಈ ಪಂಚರಾತ್ರ ಸಿದ್ಧಾಂತವನ್ನು ಶ್ರೀಮಚ್ಛಂಕರಾಚಾರ್ಯರು ತಮ್ಮ ವೇದಾಂತ ಸೂತ್ರ ಭಾಷ್ಯದಲ್ಲಿ ಖಂಡಿಸಿದರು. ಪರಮಾತ್ಮ ಜೀವಾತ್ಮಗಳಲ್ಲಿ ಸೇವ್ಯಸೇವಕಭಾವವಿರುತ್ತದೆಂದು ಭಾಗವತ ಮತವು ಹೇಳುತ್ತದೆ. ಆದರೆ ಶ್ರೀಶಂಕರಾಚಾರ್ಯರು ಇದನ್ನು ವಿರೋಧಿಸಿ ಜೀವನು ಪರಮಾತ್ಮನದೇ ಅಂಶವೆಂತಲೂ, ಕರ್ಮಸಮುಚ್ಚಯದಿಂದ ಮುಕ್ತಿಯಾಗದೆ ಜ್ಞಾನದಿಂದಲೇ ಮುಕ್ತಿಯಾಗುತ್ತದೆಂತಲೂ ಸಿದ್ಧಾಂತ ಮಾಡಿದರು.

ಈ ಪ್ರಕಾರ ಶ್ರೀಶಂಕರಾಚಾರ್ಯರಿಂದ ವೈಷ್ಣವಮತದ ಮೇಲಾದ ಆಘಾತವನ್ನು ದೂರಪಡಿಸುವುದಕ್ಕಾಗಿ ವಿಶಿಷ್ಟಾದ್ವೈತ ಮತದ ಪುರಸ್ಕರ್ತರಾದ ಶ್ರೀರಾಮಾನುಜಾಚಾರ್ಯರು ಮುಂದಾಗಿ ಶ್ರುತಿ, ಸ್ಮೃತಿ, ಬ್ರಹ್ಮಸೂತ್ರಾದಿಗಳ ಆಧಾರದಿಂದ 'ಬ್ರಹ್ಮನು ನಿರ್ಗುಣನಾಗಿರದೆ ಅನೇಕ ಗುಣ ವಿಶಿಷ್ಟನೆಂದೂ, ಜ್ಞಾನ, ಕರ್ಮಗಳೆರಡರ ಸಮುಚ್ಚಯವೇ ಮೋಕ್ಷಸಾಧನಕ್ಕೆ ಅವಶ್ಯಕವೆಂದೂ, ಜ್ಞಾನಕ್ಕಿಂತ ಭಕ್ತಿಯೇ ಮೋಕ್ಷಕ್ಕೆ ಸುಲಭ ಸಾಧನವೆಂದೂ ಪ್ರತಿಪಾದಿಸಿದರು. ವಿಷ್ಣುವೇ ಪರಮಾತ್ಮನೆಂದೂ, ಜೀವಾತ್ಮನು ಪರಮಾತ್ಮನ ಅಣುರೂಪ ಅಂಶವೆಂದೂ, ಜೀವಾತ್ಮನು ಸ್ವತಂತ್ರನೂ ಗೀತೆಯಲ್ಲಿ ಹೇಳಿದ ಜ್ಞಾನಯುಕ್ತ ಭಕ್ತಿಪೂರ್ಣ ನಿಷ್ಕಾಮ ಕರ್ಮವೇ ಸಾಧನವೆಂದು ಇವರ ಅಭಿಪ್ರಾಯವು. ಇವರ ಮತಾನುಯಾಯಿಗಳು ಮುಖ್ಯವಾಗಿ ತಮಿಳುನಾಡಿನಲ್ಲಿರುತ್ತಿರುವರು. ಇವರು ತ್ರಿನಾಮಧಾರಿಗಳಾಗಿದ್ದು ಶ್ರೀ ಸಾಂಪ್ರದಾಯದವರೆಂದು ಎನಿಸಿಕೊಳ್ಳುವರು.

ಶ್ರೀರಾಮಾನುಜಾಚಾರ್ಯರ ತರುವಾಯ ದ್ವೈತಮತವೆಂಬ ವೈಷ್ಣವ ಪಂಥವನ್ನು ಮಧ್ವಾಚಾರ್ಯರು ಪ್ರತಿಪಾದಿಸಿದರು. ಶ್ರೀವಿಷ್ಣುವೊಬ್ಬನೇ ಅನಾದ್ಯನಂತ ಪರಮಾತ್ಮನೆಂತಲೂ, ಅವಿನಾಶಿಯೆಂತಲೂ, ಶ್ರೀವಿಷ್ಣು ಹಾಗೂ ಮನುಷ್ಯರಲ್ಲಿ ಸೇವ್ಯಸೇವಕಭಾವವುಂಟೆಂತಲೂ ಇವರ ಮತವು. ಶ್ರೀವಿಷ್ಣುವಿನಲ್ಲೇ ಭಕ್ತಿಯುಳ್ಳವರಾಗಿ ಅವನ ಆಯುಧಗಳನ್ನು ಶರೀರದಲ್ಲಿ ಧಾರಣ ಮಾಡಬೇಕೆಂದು ತಪ್ತ ಮುದ್ರಾಧಾರಣ, ಗೋಪಿಚಂದನ ಮುದ್ರಾಧಾರಣಗಳನ್ನು ಪ್ರಚಾರದಲ್ಲಿ ತಂದರು. ಇವರ ಮತಾನುಯಾಯಿಗಳಿಗೆ ಮಾಧ್ವರೆನ್ನುವರು. ಇವರು ಮದ್ರಾಸ ಇಲಾಖೆ, ಮುಂಬೈ ಇಲಾಖೆಯ ದಕ್ಷಿಣ ಭಾಗಗಳಲ್ಲಿರುವರು.

*(ಮುಂದುವರಿಯುವುದು)*

*PAGE DONATED BY :* ***SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR***

# ಮೇಘದೂತವನ್ನು ಕನ್ನಡಕ್ಕಿಳಿಸಿದ ಕನ್ನಡ ಕಣ್ಮಣಿಗಳು

✍ ಶೈಲಜಾ ಹೆಗಡೆ, ಮುಂಬಯಿ

*(ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ)*

**ಮೇಘಸಂದೇಶ – ಕ. ನರಸಿಂಹ ಶಾಸ್ತ್ರಿ :** ಹಳಗನ್ನಡ ಪದಘೂಯಿಷ್ಟವಾದ 'ಮೇಘಸಂದೇಶ' ಎಂಬ ಕ. ನರಸಿಂಹ ಶಾಸ್ತ್ರಿಗಳ ಅನುವಾದ ಕಾವ್ಯವು ನೂರಿಪ್ಪತ್ತು ಪದ್ಯಗಳನ್ನು ಹೊಂದಿದೆ. 1942ನೆಯ ಇಸ್ವಿಯಲ್ಲಿ ಪ್ರಕಾಶಗೊಂಡ ಇದು ಪೂರ್ವಮೇಘ ಮತ್ತು ಉತ್ತರಮೇಘವೆಂದು ವಿಭಾಗಿಸಲ್ಪಟ್ಟಿದೆ. 20 ಮಾತ್ರೆಗಳ ಆರು ಚರಣಗಳ ಬಂಧವುಳ್ಳ ಕಾವ್ಯವು ಲಾಲಿತ್ಯ ಪೂರ್ಣವಾಗಿದ್ದು, ಕಾವ್ಯದ ಭಾವಮೌಲ್ಯವನ್ನು ಹೆಚ್ಚಿಸುವಲ್ಲಿ ಸಾರ್ಥಕತೆಯನ್ನು ಪಡೆದುಕೊಂಡಿದೆ. ಶೈಲಿ ಹಳಗನ್ನಡದ್ದಾದರೂ ಎಲ್ಲಿಯೂ ಕಾಠಿಣ್ಯ ತೋರಿಬರುವುದಿಲ್ಲ. "ಕನ್ನಡ ಜನಸಾಮಾನ್ಯರೂ ಓದಬಹುದಾದಂತ ಸುಲಭವಾದ ಮಾತುಗಳನ್ನೇ ಬಳಸಬೇಕೆಂಬುದು ನನ್ನ ಗುರಿ. ಎಲ್ಲಾದರೂ ಕಾಠಿಣ್ಯ ತೋರಿದರೆ ಅದು ಪರಿವರ್ತನೆಯ ಅನಿವಾರ್ಯತೆಗಾಗಿ ಅಥವಾ ಬಂಧದ ಬಿಗಿಗಾಗಿ ಬಂದಿವೆಯೆಂದು ಹೇಳಬಹುದು" ಎಂದು ಸ್ವತಃ ಕವಿಯೇ ನುಡಿದಿದ್ದಾರೆ. ಛಂದಸ್ಸಿನ ವಿಷಯದಲ್ಲಿಯೂ ಮೂಲ ಛಂದಸ್ಸಿನ ನಡೆಯನ್ನೂ ನಾಲ್ಕು ಚರಣಗಳ ಬಿಗಿ ಮತ್ತು ಸ್ವಾರಸ್ಯವನ್ನೂ ಇಳಿಸಿಕೊಳ್ಳಲು ಸಾಧ್ಯವಾದಷ್ಟು ಪ್ರಯತ್ನ ಮಾಡಿದ್ದೇನೆ ಎಂದೂ ಕವಿ ಕಾವ್ಯದ ಬಗೆಗಿನ ತಮ್ಮ ದೃಷ್ಟಿಕೋನವನ್ನು ವ್ಯಕ್ತಪಡಿಸಿದ್ದಾರೆ. ಕಥಾಕ್ರಮದಲ್ಲಿ ಯಾವುದೇ ವ್ಯತ್ಯಾಸವನ್ನು ಮಾಡದೇ ಮೂಲ ಕಾಳಿದಾಸನ ಮೇಘದೂತ ಕಾವ್ಯದ ಜಾಡನ್ನೇ ಅನುಸರಿಸಿಕೊಂಡು ಇವರ ಕಾವ್ಯ ಮುಂದುವರಿದಿದೆ.

ನರಸಿಂಹ ಶಾಸ್ತ್ರಿಗಳ ಕಾವ್ಯದ ಪದ್ಯಗಳು ಮೃದುಪದ ಗತಿಗಳಿಂದ ಕೂಡಿ ಲಯ ಸಂಪನ್ನವಾಗಿರುವುದು ಕಂಡುಬರುತ್ತವೆ. ಉದಾಹರಣೆಗೆ,

ಶ್ರೀರಾಮ ಪರಿಪೂಜ್ಯ ಚರಣ ಮುದ್ರಿತವಾದ
ಮೇಖಲೆಯನೊಂದಿರುವ ಶೈಲೇಂದ್ರನನ್ನಪ್ಪಿ
ಅಪ್ಪಣೆಯ ಪಡೆದುಕೋ; ನಿನ್ನ ಸಖನುನ್ನತನು,
ಕಾಲಕಾಲದೊಳೊಗೆವ ಸುಖಸಮಾಗಮದಲ್ಲಿ
ಚಿರವಿರಹದಿಂದೊಗೆದ ನಸುಬಿಸಿಯ ಕಂಬನಿಯ
ಕಾವಳವು ಕವಿತಿರಲು ಪ್ರಕಟಿಪನು ಸ್ನೇಹವನ್ನು.

ಮುಳ್ಳರಳಿ ಹೂವಾದ ಕೇದಗೆಯ ಹಳದಿಯಿಂ-
ದುಪವನದ ಬೇಲಿಗಳು, ಗೂಡಿಗಾಗುರವಣಿಪ
ಊರ ಹಕ್ಕಿಗಳುಲಿವ ಬೀದಿಬೀದಿಯ ಮರಗಳು,
ಕಪ್ಪಾದ ಕಳಿವಣ್ಣ ಜಂಬೂವನಾಂತಗಳು,
ಕೆಲವು ದಿನ ಮಾತ್ರವೇ ಇರುವ ಹಂಸಾಳಿಗಳು
ನೀ ಬಂದ ಕುರುಹೆನಿಸಿ ತೋರ್ಪುದು ದಶಾರ್ಣದಲ್ಲಿ,

ಕವಿಯ ಕಾವ್ಯರಚನೆಯ ಓಘದಲ್ಲಿ ಕೆಲವು ಕಡೆ ಕಂಡುಬರುವ ಪ್ರಾಸಬದ್ಧ ಪದಗಳ ಸಂಯೋಜನೆ, ಪ್ರಾಸಾನುಕೂಲ ಪದಗಳಿಗೆ ಕವಿಯಲ್ಲಿ ಕೊರತೆಯಿಲ್ಲವೆಂಬುದನ್ನು ತೋರಿಸಿಕೊಡುತ್ತದೆ.

ತಾರಹಾರಗಳೇನು! ತರಳಘುಟಿಕೆಗಳೇನು!
ಕೋಟಿಗಟ್ಟಲೆ ಸುರಿದ ಶಂಖಶುಕ್ತಿಗಳೇನು!
ಎಳೆಹಸುರ ಛವಿಯೊಡೆವ ಗರುಡ ಪಚ್ಚೆಗಳೆಷ್ಟು!
ಕಳೆಯೊಗೆಯೆ ಕಂಡಿರಿಸಿ ಕಾಣೆಪ ಹವಳವೆಷ್ಟು!
ಅಲ್ಲಿನಂಗಡಿಗಳಲಿ ಚೆಲ್ಲಿಹುದ ನೋಡಿದರೆ
ಜನನಿಧಿಯೊಳುಳಿದಿಹುದು ನೀರೊಂದೆಯೆನ್ನಬಹುದು



ಎಂಬೀ ಪದ್ಯವು ಉಜ್ಜಯಿನಿ ನಗರದ ಸಂಪದ್ಭರಿತ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ಅಂತೆಯೇ ಕೆಲವು ಪದ್ಯಗಳಲ್ಲಿ ರುಚಿಗೆ ತಕ್ಕಷ್ಟೆಂಬಂತೆ, 'ಪಥಖೇದಪರಿಹಾರ', 'ಹರಧವಳ ವೃಷಭೇಂದ್ರ', ಶ್ರೀಕಂಠಕಂಠಕಾಂತಿ', 'ವಿಬುಧ', 'ಸರ್ಪಶಯನ', 'ನಿಷ್ಕಲಾರಂಭ' ಮೊದಲಾದ ಸಂಸ್ಕೃತ ಪದಗಳು ಕಾವ್ಯವನ್ನು ರಂಜಿಸಿವೆ. 'ಊರಹಕ್ಕಿ', 'ಮಾಲೆಗಾರ್ತಿ', 'ಕಣ್ಣಾಲಿಗುಡ್ಡೆ', 'ಅಂಟಂಟಿ ಜಿಡುಕಾಗಿ', 'ನಟ್ಟದಿಟ್ಟಿ' ಮೊದಲಾದ ದೇಸಿ ಪದಗಳನ್ನು ಬಳಸಿ ಕಾವ್ಯವನ್ನು ಸರಳಗೊಳಿಸಿರುವುದೂ ಗಮನಾರ್ಹವಾಗಿದೆ. ಅಲ್ಲದೆ, ಕುಬೇರನ ವೈಭವವನ್ನೂ ನಿತ್ಯ ಯೌವನರಾದ ಯಕ್ಷರ ಆನಂದಮಯ ಸ್ಥಿತಿಯನ್ನು ನರಸಿಂಹ ಶಾಸ್ತ್ರಿಗಳು ಮೂಲಕಾವ್ಯಕ್ಕೆ ಸಮನಾಗಿ ವರ್ಣಿಸಿದ್ದಾರೆ. ಅದು ಇಂತಿದೆ,

ಆನಂದೋತ್ಥಂ ನಯನಸಲಿಲಂ ಯತ್ರ ನಾನ್ಯೈರ್ನಿಮಿತ್ತೈಃ ।
ನಾನ್ಯಸ್ತಾಪಃ ಕುಸುಮಶರಜಾದಿಷ್ಟ ಸಂಯೋಗಸಾಧ್ಯಾತ್ ॥
ನಾಪ್ಯನ್ಯಸ್ಮಾತ್ರಣಯಕಲಹಾದ್ವಿಪ್ರಯೋಗೋಪಪತ್ತಿ-
ರ್ವಿತ್ತೇಶಾನಾನ್ನ ಚ ಖಲು ವಯೋ ಯೌವನಾದನ್ಯದಸ್ತಿ ॥
ಅಲ್ಲಿನ ಧನಾಧಿಪರ ವೈಭವವನೇನೆಂಬೆ;
ಆನಂದಕಲ್ಲದೆಯೆ ಬೇರೆ ಕಣ್ಣೀರಿಲ್ಲ,
ಪ್ರಿಯಜನರ ಸಂಗದಿಂ ಮುಗಿವಂಥ ಕಾಮಶರ-
ಸಂತಾಪವಲ್ಲದಿರೆ ತಾಪವೆಂಬುದೆ ಇಲ್ಲ,
ಪ್ರಣಯಪ್ರಕೋಪವೊಂದಲ್ಲದಿರೆ ವಿಪ್ರಯೋ-
ಗವು ಇಲ್ಲ, ಮುಪ್ಪಿಲ್ಲ, ನಿತ್ಯ ಯೌವನರೆ ಎಲ್ಲಾ

"ಕಾಳಿದಾಸನು ಈ ಖಂಡಕಾವ್ಯದಲ್ಲಿ ಪತಿಪತ್ನಿಯರ ಅನನ್ಯ ಪ್ರೇಮವನ್ನೂ ಪ್ರಣಯದ ಅಕಳಂಕತೆಯನ್ನೂ ವಿರಹ ಕಾಲದ ಆಶಾಬಂಧವನ್ನೂ ವೇದನಾ ನಿರ್ಭರತೆಯನ್ನೂ ವಿಶದವಾಗಿ ಗಂಭೀರವಾಗಿ ವರ್ಣಿಸಿದ್ದಾನೆ.

ಅವನ ಲೋಕೋತ್ತರವಾದ ಉಪಮೆಗಳ ಸ್ವಾರಸ್ಯ, ಅರ್ಥಾಂತರ ನ್ಯಾಸದ ಸೊಬಗು ಇಲ್ಲಿ ಯಥೇಚ್ಛವಾಗಿ ಬಂದಿವೆ. ಕಲ್ಪನೆ ಮುಗಿಲು ಮುಟ್ಟಿದೆ. ಈ ಕಾವ್ಯವನ್ನು ಅನುಕರಿಸಿ ಹಲವು ಕಾವ್ಯಗಳು ಬಂದಿವೆಯಾದರೂ ಇದನ್ನು ಮೀರಿಸಿದ ಈ ತರದ ಇನ್ನೊಂದು ಕಾವ್ಯ ನಮ್ಮ ಸಾಹಿತ್ಯದಲ್ಲಿಲ್ಲ; ವಿಶ್ವಸಾಹಿತ್ಯದಲ್ಲೂ ಇಲ್ಲವೆನ್ನಬಹುದು. ಕಾಮಪ್ರೇಮ ಜೀವಿಯ ಅದಮ್ಯವಾದ ಹುಟ್ಟುಗುಣ. ಇದಿಲ್ಲದ ಜೀವನ ಸಾಗಿದೆ, ಸಾಗುತ್ತದೆ ಎಂದು ಹೇಳಿದರೆ ಅಷ್ಟರಮಟ್ಟಿಗೆ ನಾವು ಅತೀಂದ್ರಿಯತೆಯನ್ನು ಒಪ್ಪಿದಂತಾಗುತ್ತದೆ. ಕಾಮ ಚತುರ್ವಿಧ ಪುರುಷಾರ್ಥಗಳಲ್ಲಿ ಒಂದು. ಇದರ ಸಂಗತಿಯನ್ನು, ಸಂಗೀತವನ್ನು ಅರಿಯುವುದು ಸರಸ, ಮರೆಯುವುದು ವಿರಸ ಅಥವಾ ಅರಸ. ಇದನ್ನು ಕವಿಗಳು ಮನಮುಟ್ಟುವಂತೆ ವರ್ಣಿಸಿದ್ದಾರೆ. ನಾವು ಮಾನವರು, ಜಿತೇಂದ್ರಿಯರಲ್ಲ. ಇಂದ್ರಿಯಾಧೀನರೂ ಅಲ್ಲ. ಪ್ರೇಮವು ಪಾಶವೀಯತೆಯ ಕ್ಷಣಿಕಾಮೋದವನ್ನು ಪ್ರೇರಿಸುವಂತಾಗದೆ ಜೀವನದ ಸತ್ವವಾಗಿ ಸಾರವಾಗಿ ಉಳಿಯುವ ಪರಿ ನಮಗೆ ಬೇಕು.

*PAGE DONATED BY :* ***SHRI N. R. HEGDE, DOMBIVLI***

# The Essence of Bhagavad-Gita

✍ **Shraddha Hegde** (BE-Engg)



**Kshetra Kshetrajnya Vibhaga Yoga :** Here, Arjuna questions about the wisdom of Body and Soul. He wishes to know more about prakriti, purusha and knowledge. Shri Krishna's exposition about these two aspects is explained in this chapter systematically by giving a metaphor of body as "Field". The one who knows this body is called the knower of the field. This field contains more than just physical body-it includes the mind, intellect, ego, senses and all other components of material energy that are part of our personality. All the Pancha Mahabhutas, Panchendriyas and Dashendriyas and its interactions are considered to be the field of activities. The knowledge of field of activities and "knower" of activities is not new and is described by various sages in our Vedic scriptures and Brahma Sutras.

The Super soul is the original source of all beings. He is the master of all modes of material nature. He is the source of light, undivided, and object of knowledge. He is situated in everyone's heart. Just like the sky which is all pervading but does not mix with anything, the Super soul also does not mix with the body although it's situated in there. Some people acquire this knowledge through meditation, some by selfless service and some by following the teachings. There are certain virtues like non-violence, humility, forgiving nature and many more mentioned in this chapter which makes the person knowledgeable. One who understands the difference between the perishable body, immortal soul and supreme soul and realizes the process of liberation attains Brahman.

*(To be continued...)*

---

ಕಾಳಿದಾಸನ ಕಾವ್ಯಗಳಲ್ಲಿ ಈ ಬಗೆಯ ಹೆಚ್ಚಳವಿದೆ. ರಸಗಳಲ್ಲೆಲ್ಲಾ ಶೃಂಗಾರ ಪ್ರಧಾನ. ಅದರ ಒರೆಗಲ್ಲು ವಿಪ್ರಲಂಭ. 'ವಿರಹ ವೇದನೆಗೆ ಪಲಬಗೆಯ ಉಗ್ರತಪಂಗಳೀಡಲ್ಲ' ಎಂದು ಹೊನ್ನಮ್ಮ ತನ್ನ ಲೋಕಾನುಭವವನ್ನು ಬಣ್ಣಿಸಿದ್ದಾಳೆ. ಶಾಕುಂತಳದ ಲೋಕಮಾನ್ಯತೆಗೆ ಹಲವಂಶಗಳ ಜೊತೆಯಲ್ಲಿ ಅಲ್ಲಿರುವ ವಿಪ್ರಲಂಭ ಮುಖ್ಯ ಕಾರಣವಾಗಿದೆ. ವಿಪ್ರಲಂಭ ಅಲ್ಲಿ ಕಥೆಯ ಒಂದು ಅಂಶವಾದರೆ ಮೇಘಸಂದೇಶದಲ್ಲಿ ವಿಪ್ರಲಂಭದ್ದೇ ಒಂದು ಕಥೆ" ಎಂದು ಶಾಸ್ತ್ರಿಯವರು ಕಾಳಿದಾಸನ ಮೇಘದೂತ ಕಾವ್ಯದ ಗುಣಗಾನ ಮಾಡಿದ್ದಾರೆ.

ಈ ಹಿಂದೆ ಉಲ್ಲೇಖಿಸಿದಂತೆ, ನರಸಿಂಹ ಶಾಸ್ತ್ರಿಗಳ ಅನುವಾದ ಕಾವ್ಯದ ಕೊನೆಯಲ್ಲಿ ಎರಡು ಮುಕ್ತಕಗಳಿವೆ. ಮೊದಲನೆಯ ಮುಕ್ತಕದಲ್ಲಿ, ಯಕ್ಷನ ಸಂದೇಶ ನುಡಿಯು ವಿದ್ಯುತ್ ಆವರ್ತದಲ್ಲಿ ಪಸರಿಸಿದಾಗ, ಆ ನುಡಿಯನ್ನು ಆಲಿಸಿದ ಯಕ್ಷಾಧಿಪತಿ ಕುಬೇರನು ಯಕ್ಷನ ಅಪರಾಧವನ್ನು ಕ್ಷಮಿಸಿ, ಆತನ ಶಾಪ ವಿಮೋಚನೆಗೊಳಿಸಿದನೆಂದು ಸೂಚಿಸುತ್ತದೆ.

ಉದ್ಧರಿಪ ಹೃದಯವಿರಲೆಲ್ಲರಿಗೆ ಕೇಳುವುದು
ಯಕ್ಷನಾಡಿದ ನುಡಿಯಮಿಂತು ಪರಿದೈದುತ್ತ
ಶಾಂತನಿಸ್ವನಮಾಗಿ ಮೊದಲ ಮಳೆಹನಿಯಂತೆ
ಯಕ್ಷಿಣಿಯನೆಚ್ಚರಿಸಿ ಶಿವನಕೃಪೆಯೊದವಿಸಲು
ಶಾಪದವಧಿಯ ಕಳೆದು ಕ್ಷಮಿಸುವನು ಯಕ್ಷಪತಿಯು

ಮೂಲ ಕಾವ್ಯದ ಹಲವು ಪಾಠಾಂತರಗಳಲ್ಲಿಲ್ಲದ ಸನ್ನಿವೇಶವನ್ನು ಶಾಸ್ತ್ರಿಗಳು ಕಾವ್ಯವನ್ನು ಸುಖಾಂತವಾಗುವಂತೆ ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಕೈಲಾಸದಲ್ಲಿ ನೆಲೆಸಿರುವ ಪರಶಿವನ ಪೂಜೆಯಲ್ಲಿ ಹಾಜರಿದ್ದು, ಪೂಜಾ ಸಮಯದ ಸಂಗೀತ, ವಾದ್ಯಮೇಳಗಳಲ್ಲಿ ಪಾಲ್ಗೊಂಡು ಶಿವಾನುಗ್ರಹಕ್ಕೆ ಪಾತ್ರನಾಗಬೇಕೆಂದು ಯಕ್ಷನು ಮೋಡದೊಡನೆ ಕೇಳಿಕೊಳ್ಳುತ್ತಾನೆ. ಯಕ್ಷನ ಪರಶಿವನ ಕುರಿತ ಭಕ್ತಿಯ ಫಲಸ್ವರೂಪವಾಗಿ ಆತನ ಶಾಪ ವಿಮೋಚನೆಯಾಗುತ್ತದೆಯೆಂದು ಕವಿ ಕಲ್ಪಿಸುತ್ತಾರೆ. ಎರಡನೆಯ ಮುಕ್ತಕದಲ್ಲಿ,

ದೇಶಕಾಲದ ಮೇರೆಮಿತಿಯೆಂಬುದಿಲ್ಲದೆಯೆ
ಮೆರೆವ ವರಕಾವ್ಯವನು ಕನ್ನಡಿಸಿ ಪೇಳಿಹೆನು,
ಬಿಂಬಮಾತ್ರದೊಳಲ್ಲ, ಜೀವದುಸಿರಲಿ ನಿಂದು
ಪೊರೆಯೆಂದು ಕನ್ನಡಾಂಬೆಯನಿರದೆ ನೋಂತಿಹೆನು;
ಕಂದುಕುಂದನು ಕಳೆದು, ನಿರ್ಮಲಿನ ಪರಿಪೂರ್ಣ-
ಮಾಗಿಸುತೆ ಕನ್ನಡಿಗರೊಲಿದು ಕೈಕೊಳ್ವುದಿದನು.

ಈ ಕಾವ್ಯ ದೇಶಕಾಲಾತೀತವಾದುದು. ಇದನ್ನು ಕನ್ನಡಿಸಿ ಪೇಳಿರುವೆನೆಂದೂ, ಜೀವದುಸಿರಲಿ ನಿಂದು ತನ್ನನ್ನು ಕಾಯಬೇಕೆಂದೂ ಕನ್ನಡಾಂಬೆಯಲ್ಲಿ ನರಸಿಂಹ ಶಾಸ್ತ್ರಿಗಳು ಪ್ರಾರ್ಥಿಸಿಕೊಳ್ಳುತ್ತಾರೆ. ಸಹೃದಯ ಓದುಗರು, ಕಾವ್ಯದ ಕುಂದುಗಳನ್ನೆಣಿಸದೆ, ಅದನ್ನು ಶುದ್ಧಗೊಳಿಸಿ, ಪರಿಪೂರ್ಣವಾಗಿಸಿಕೊಂಡು ಸ್ವೀಕರಿಸಬೇಕೆಂದು ವಿನಂತಿಸಿಕೊಂಡಿದ್ದಾರೆ.

*(ಮುಂದುವರಿಯುವುದು)*

*PAGE DONATED BY :* ***AKADAS & FAMILY***

# REPORT OF ANNUAL GENERAL BODY MEETING

"We had faith in the supreme force, we prayed with folded hands to Lord Ganesh to end that phase of life which was full of anxiety, fear and suffering. Even at the moment of despair we had the feeling that we are all together. While passing through our tough time, we felt, survival was a blessing. Today, by the grace of Lord Idagunji Ganapati, we are here, in the presence of each other" said Shri Shivkumar Bhagwat, President, Havyaka Welfare Trust. He was welcoming the members for the 56th and 57th th Annual General Body Meeting held on 26th March. The President explained to the Members that due to ongoing pandemic and adherence to the rules and regulations of the civic body and government, the AGM could not be held so far.

He thanked the Committee Members and the editorial board for working hard during the lock down period and the donors who stood by the Trust during the testing period. He told that financial help was given by the Trust to the members who had a setback in their income during the lockdown. He also explained that during the lock down period the Trust has also suffered financial loss as the Leave and Licence Agreement between the Trust and Awaz Company got over. He thanked Shri Sushilbhai of Awaz Company for continuing with the maintenance of Havyakara Sabhgraha on their request. Referring to the Dhyan Mandir at Dombivili, the President said that due to the closure of tuition classes, Shubham Karoti has expressed their desire to terminate the Agreement. He called for the discussions on the matters in the agenda.

The Programme started with the prayer by Smt. Kala Bhagwat.

Hon. Gen. Secretary Shri Narayan Akadas asked the members whether the Members have any query on the minutes. As there were no points for discussion it was confirmed. Similarly, Income and Expenditure Account and Balance Sheet for the years 2019-20 and 2020-21 were approved and adopted. M/s. N. K. Bhat & Co. was reappointed as the Statutory Auditor for the year 2021-22 with the same remuneration. Mr. Mahesh Hegde was re-appointed as the Honorary Internal Auditor of the Trust for the accounting year 2021-22.

There was a long discussion regarding the management of Havyakar Bhavan at Ghatkopar and Dhyan Mandir at Dombivli.

The members paid homage to the departed souls by observing one minute silence.

Shri S. V. Shastri, Returning Officer declared the names of the 6 elected Managing Committee Members for 2020-2021 & 2021-2022. Shri Shastri declared that Shri Shivkumar Bhagwat, Shri Sanjay Bhat, Shri R. N. Kameshwar, Shri N. K. Hegde, Smt. Tanuja Hegde and Shri Arvind K. Bhat are elected unopposed for the year 2020-2021 & 2021-2022. Shri Shastri also declared the names of the unopposed 7 elected Managing Committee Members for the year 2021-2022 & 2022-2023 viz. Shri Narayan Akadas, Shri Anant Bhat, Smt. Shashikala Hegde, Shri Umamaheshwar Hegde, Shri Ramesh Vaidya, Shri Chidananda Bhagwat and Shri Gautam Upadhya, Shri S. V. Shastri congratulated all the incoming Managing Committee Members.

The Vice President Shri Sanjay Bhat gave a vote of thanks mentioning the hard work done by the committee members, generous donations given by the Donors and members of the Trust whenever required. He also thanked the members for participating in the General Body meeting and encouraging the Managing Committee.

*PAGE DONATED BY :* ***SHRI ROKESH HEGDE & FAMILY, DAHISAR***

# ಮೃಗನಯನಾ

✍ **ಡಾ. ಜಯಂತ ಕಾಯ್ಕಿಣಿ**

*(ಕಳೆದ ಸಂಚಿಕೆಯಿಂದ)*

ಚಂದಾಳ ಗುಂಪು ಮರಳಲು ಇನ್ನೂ ಅದೆಷ್ಟು ದಿನವೋ ಎಂದು ಕಾಳಜಿಯಾಗುತ್ತಿತ್ತು ಮೂವರಿಗೂ. ಆದರೆ ಅದರ ಬಗ್ಗೆ ಆಡಿಕೊಂಡರೆ ಅದೆಲ್ಲಿ ಅಧಿಕೃತವಾಗಿ ನಿಜವಾಗಿ ಬಿಡುತ್ತದೋ ಎಂದು ಸುಮ್ಮನಿರುತ್ತಿದ್ದರು. ಬೀದಿಬೀದಿ ಅಲೆದು ಮನೆ ಮನೆಗೆ ಹೋಗಿ, ಶಾಲೆಗೆ ಹೋಗದ ಮಕ್ಕಳನ್ನು ಎಳೆದುಕೊಂಡು ಬಂದು ಅಂಗನವಾಡಿಯಲ್ಲಿ ಹಾಡಿಸುತ್ತಿದ್ದ ಅರ್ಶಿಯಾ ಮಾಂಶಿ ಒಂದು ದಿನ ಗೊಣಗುತ್ತಲೇ ಹೇಳಿದಳು - 'ನಮ್ಮ ಜನಗಳ ಬುದ್ಧಿ ಎಷ್ಟು ಸಣ್ಣಾಗಿ ಹೋಗಿದೆ ನೋಡ್ರಿ. ಚಂದಾ ತಾಯಿಗೆ ಇಲ್ಲಿ ಮನೇಲಿ ಏನೋ ಸಮಸ್ಯೆ ಇದೆ. ಅದಕೇ ಆಕೆ ಹರಕೆ ಹೊತ್ಕೊಂಡಳು. ಇಲ್ದಿದ್ರೆ ಯಾಕವಾ ಇಂಥ ತ್ರಾಸಿನ ಯಾತ್ರೆಗೆ ಹೋಗಬೇಕಿತ್ತು. ಮಕ್ಕಳಾಗದವು, ಹಿಸೆ ಸಮಸ್ಯೆ ಇರಾವು...ಸೋಡಚೀಟಿ ಪ್ರಕರಣ ಇರಾವು...ದೇವರಿಗೆ ಹರಕೆ ಹೊರತಾವು. ಇವಳಿಗೇನೋ ಸಮಸ್ಯೆ ಖಂಡಿತ ಇದೆ ಅಂತ ದುರ್ಬೀನು ಹಿಡಕೊಂಡ್ ಹುಡುಕಲಿಕ್ಕೆ ಹತ್ಯಾರವಾ. ಛೇ. ದಿನಾ ಒಡನಾಡು ಜನಾ. ನಿಮ್ಮ ಸರಳ ನೆಮ್ಮದಿ ನೋಡಲಿಕ್ಕಾಗುವುದಿಲ್ಲ ಅವರಿಂದ'. ಯಮುನಾ ಬಾಯಿಗೆ ನಗು ಬಂತು. 'ಅಯ್ಯಾ, ನಾವೆಲ್ಲಾ ಸೇರಿಯೇ ಹೋಗಬೇಕಿತ್ತವಾ..ಈ ಪೋರನ ಶಾಲೆ, ಪರೀಕ್ಷೆ ತಪ್ತದ, ಅಂತ ಹೋಗಿಲ್ಲ, ನಮ್ಮೆಲ್ಲರ ವತಿಯಿಂದ ಅವಳು ಹೋಗ್ಯಾಳ. ದೇವರ ಸಹವಾಸ ಅನುಭವಿಸಲಿಕ್ಕೆ ಕಾರಣ ಬೇಕೇನು? ಛೇ, ಅರ್ಶೀ ನೀನು ತಲೆ ಹಾಳು ಮಾಡಿಕೋಬೇಡ. ಖರೇ ಅಂದರೆ, ಯಾರು ಹೀಗೆಲ್ಲಾ ಆಡಿಕೋತಾರೋ, ಪಾಪ ಅವರಿಗೇ ಏನೇನೋ ತಾಪತ್ರಯ ಇರ್ತಾವೆ. ಉಳಿದವರಿಗೂ ತಾಪತ್ರಯ ಇದೆ ಅಂದುಕೊಂಡಾಗಲೇ ಅದರಿಂದ ಅವರಿಗೆ ಏನೋ ಸಮಾಧಾನ. ನೀ ಕಾಳಜಿ ಮಾಡಬೇಡ. ದೊಡ್ಡ ಮನಸ್ಸಿನ ಹುಡುಗಿ ಚಂದಾ' ಎಂದು ಯಮುನಾ ಬಾಯಿನೇ ಅರ್ಶಿಯಾಗೆ ಸಮಾಧಾನ ಮಾಡಿದಳು. ಹೀಗೆ ಅರ್ಶಿಯಾ ಆಗಾಗ ಬಂದು ಬಟ್ಟೆ ಹರವಲು ತೆಗೆಯಲು ಮಡಿಕೆ ಮಾಡಿ ಪೊಟ್ಟಣ ಕಟ್ಟಲು ಕೈಲಾದ ಸಹಾಯ ಮಾಡಿ ಮರಳುತ್ತಿದ್ದಳು. ವಾರಗಳು ಕಳೆದವು. ದಿಂಡಿ ಹೋದವರೆಲ್ಲ ಗುಂಪಿನಲ್ಲಿ ಅಥವಾ ಬಿಡಿ ಬಿಡಿಯಾಗಿ, ಕೆಲವರು ಬಸ್ಸಿನಲ್ಲಿ, ಕೆಲವರು ಹರಕೆಯಂತೆ ನಡೆದುಕೊಂಡೇ ಮರಳಿದರು. ಆದರೆ ಚಂದ್ರಭಾಗಾ ಮರಳಲಿಲ್ಲ.

ನೀರವದ ತಂತಿಯೊಂದು ತನ್ನ ಚಡಪಡಿಕೆಯಲ್ಲಿ ಬಿಗಿಯಾಗುತ್ತ ಹೋಗಿ ಹರಿದು ಬಿಟ್ಟಂತೆ ದಿಗಂಬರ 'ನನಗೆ ಅನಿಸಿತ್ತು...ನನಗೆ ಅನಿಸಿತ್ತು...' ಎಂದ ತೊದಲುತ್ತ ಹಸ್ತಾಕ್ಷರನ ಎಳೆ ಕೈಗಳನ್ನು ಮುಖಕ್ಕೊತ್ತಿಕೊಂಡು ಬಿಕ್ಕಿ ಬಿಕ್ಕಿ ಅತ್ತ. ಯಮುನಾ ಬಾಯಿ ಒಂದು ಕಾಲು ಮಡಿಸಿ ಗೋಡೆಗೆ ಆತುಕೊಂಡು ಮಾತಿಲ್ಲದೆ ಕೂತು ಬಿಟ್ಟಳು. ಇರುವ ಅದೇ ಮನೆ ವಸ್ತುಗಳಾದ ಹಾಸಿಗೆ, ಕಿರ್ಲೋಸ್ಕರ ಖುರ್ಚಿ, ರೇಡಿಯೋ, ಹಳದಿ ಪ್ಲಾಸ್ಟಿಕ್ ದಾರದ ಮೇಲೆ ತೂಗುಬಿದ್ದ ಸೀರೆ, ಟುವಾಲುಗಳು ಒಮ್ಮೆಲೇ ಬೇರೆ ಥರ ಕಂಡು ಹಸ್ತಾಕ್ಷರ ವಿಷಣ್ಣನಾಗಿ ಅಜ್ಜಿಯ ಕಡೆ ವಾಲಿದ. ಅಜ್ಜಿ ನಿರ್ವಿಕಾರವಾಗಿ ಅವನನ್ನು ತಬ್ಬಿ ಮುದ್ದಿಸಿ ಬುತ್ತಿಯ ಪುಟ್ಟ ಡಬ್ಬಿ ಕೊಟ್ಟು 'ಹೊರಡು ಶಾಲೆಗೆ. ತಪ್ಪಿಸಬೇಡ. ಹೆದರಬೇಡ ಚಂದಾಗೆ ಏನೂ ಧಾಡಿ ಆಗಿಲ್ಲ. ಆರಾಂ ಇದ್ದಾಳೆ ಖಂಡಿತ ಬರ್ತಾಳೆ' ಎಂದಳು. ಹಠಾತ್ತನೆ ತನ್ನನ್ನು ಸಾವರಿಸಿಕೊಂಡು ದಿಗಂಬರ 'ಅಂಥದ್ದೇನೂ ಮಹಾ ಆಗಿಲ್ಲ. ಬಾ ಹೊರಡುವಾ'-ಎಂದು ಬಟ್ಟೆಯ ಮೂಟೆಯನ್ನು ಎತ್ತಿ ತನ್ನ ಸೈಕಲ್ ಕ್ಯಾರಿಯರ್ ಮೇಲೆ ಇಟ್ಟ. ಇಬ್ಬರೂ ತಮ್ಮ ಸೈಕಲ್‌ಗಳ ಮೇಲೆ ಒದ್ದೆ ದಾರಿಯಲ್ಲಿ ಚರಚರ ಚಲಿಸಿದರು. ಎಲ್ಲ ಕಡೆ ಶ್ರಾವಣದ ಹಸಿರು ಪ್ರಶಾಂತಿ ಹೊಮ್ಮುತ್ತಿತ್ತು. 'ಶಾಲೆ ಮುಗಿದಿದ್ದೇ ಅಂಗಡಿಗೆ ಬಾ. ಆಯಿ ಜಾಗದಲ್ಲಿ ಕೂತುಕೋ. ಆದಷ್ಟು ನೆರವಾಗು. ಅಲ್ಲೇ ಅಭ್ಯಾಸಾನೂ ಮಾಡು' ಎಂದ ದಿಗಂಬರನ ದನಿಯಲ್ಲಿ ಎಲ್ಲರೂ ಹೊಸ ಭೂಮಿಕೆಗೆ ಸಜ್ಜಾಗಬೇಕೆನ್ನುವ ತುರ್ತು ಇತ್ತು. ಸಳ ಸಳ ಹರಿವ ಭೀಮಾ ನದಿಯಲ್ಲಿ ಬಟ್ಟೆ ಒಗೆಯಲು ನೆಟ್ಟಗೆ ಊರಿದ ಕಾಲಿನಂಥ ಸಣ್ಣ ಸ್ಥಿರತೆ ಇತ್ತು. ದಾರಿಯಲ್ಲಿ ಸಿಗುವ ಪುಟ್ಟ ಸೇತುವೆ ಮೇಲೆ ತಮ್ಮ ಸೈಕಲ್ ನಿಲ್ಲಿಸಿ ಇಬ್ಬರೂ ಕಟಾಂಜನಕ್ಕೆ ಆತು ನದಿಯ ಹರಿವನ್ನು ನೋಡಿದರು. ಶ್ರಾವಣದ ಉಕ್ಕಂದದಲ್ಲಿ ಭೀಮೆ ತುಂಬಿ ಹರಿಯುತ್ತಿದ್ದಳು. ಮಳೆಗಾಲದ ಕೆನ್ನೀರಿನ ಛಾಯೆ ಭರಪೂರ ಇತ್ತು. ಬಾಕಿ ದಿನಗಳಲ್ಲಿ ಎದ್ದು ತೋರುತ್ತಿದ್ದ ಧಾರೆಯ ನಡುವಿನ ಕಪ್ಪು ಕಂದು ಕೋಡುಗಲ್ಲುಗಳು ಮರೆಯಾಗುವಷ್ಟು ಭರವಿತ್ತು. ಆಗಾಗ ಆ ಬಂಡೆಗಳ ಮೇಲೆ ರಿವ್ವರಿವ್ವನೆ ಬಂದು ತಂಗುತ್ತಿದ್ದ ಹಳದಿ ಚುಂಚಿನ ಬೆಳ್ಳಕ್ಕಿಗಳು ಈಗ ಪಾಪ ಎಲ್ಲ ತಂಗುತ್ತಾವೋ.



ಒಂದಿಷ್ಟು ಕಾಲ ದಿಗಂಬರನಿಗೆ, ಊರವರೆಲ್ಲ ತನ್ನ ಕುಟುಂಬದ ಕುರಿತೇ ಮಾತನಾಡುತ್ತಾರೆ ಎಂದು ಅನಿಸುತ್ತಿತ್ತು. ಬಟ್ಟೆ ಇಸ್ತ್ರಿಗೆ ಕೊಡಲು ಬಂದವರ ಮುಖದಲ್ಲಿ ಒಂದು ನಮೂನೆಯ ಸಹಾನುಭೂತಿಯ ಸುಳಿವಿಗಾಗಿ ಮನಸ್ಸು ಹಾತೊರೆಯುತ್ತಿತ್ತು. ಆದರೆ ಪೇಟೆಯಲ್ಲಿ ಸರಿದಾಡುವ ಸಂದಣಿ, ರಿಕ್ಷಾ, ಕೂಲಿಗಳು, ಸೊಪ್ಪಿನವರು, ದೇವಸ್ಥಾನದ ಸರತಿಯ ಸಾಲಿನಲ್ಲಿ ಕೈಲಿ ಹೂವು ಹಣ್ಣು ಹಿಡಿದು ಪ್ರಶಾಂತವಾದ ತಾಳ್ಮೆಯಲ್ಲಿ ನಿಂತವರು..ಎಲ್ಲರನ್ನೂ ನೋಡಿದಾಗ..ಎಲ್ಲರೂ ತಮ್ಮ ತಮ್ಮ ವೈಯಕ್ತಿಕ ಪಾಡಿನಲ್ಲಿ ಪಯಣದಲ್ಲಿ ಮುಳುಗಿದ್ದಾರೆ ಪಾಪ ಅನಿಸುತ್ತಿತ್ತು. ಸಣ್ಣ ಬೀದಿಯಲ್ಲಿ ಹಠಾತ್ತನೆ ದೊಡ್ಡ ಟ್ರಕ್ಕು ಅಥವಾ ಎರಡೆರಡು ಟ್ರೇಲರ್‌ನ ಕಬ್ಬು ಹೇರಿದ ಟ್ರಾಕ್ಟರು ಬಂದರೆ ಹೇಗೆ ಸಣ್ಣ ಪುಟ್ಟ ವಾಹನಗಳು ಇದ್ದಲ್ಲೇ ಬದಿಗೆ ಸರಿದು ನಿಂತು ನೋಡುತ್ತ, ಹಾಯಲು ಬಿಡುತ್ತ ಮತ್ತೆ ಮಾಮೂಲಿಗೆ ಮರಳುತ್ತಾವೋ ಹಾಗೆ ಎಲ್ಲರೂ ಸಂಕಟಗಳನ್ನು ನಿಭಾಯಿಸುತ್ತಾರೆ. ಕರೆಂಟು ಹೋದಾಗೆಲ್ಲ ಇದ್ದಲಿಯ ಇಸ್ತ್ರಿಯನ್ನು ಎಷ್ಟು ಚೊಕ್ಕವಾಗಿ ಸಲೀಸಾಗಿ ಬೀಸಣಿಗೆ ಬೀಸಿ ಹೋಮದ ಕುಂಡವನ್ನು ಹೊತ್ತಿಸುವಂತೆ ಚಂದಾ ಅಣಿ ಮಾಡುತ್ತಿದ್ದಳು. ಪ್ರಜ್ವಲಿಸುವ ಕೆಂಡಗಳಲ್ಲಿ ಅವಳ ಮುಖದ ತೇಜ ಇನ್ನೂ ಕಂಗೊಳಿಸುತ್ತಿತ್ತು. ಆಗಾಗ ಬೂದಿ ಹಾರಿ ಕಣ್ಣಲ್ಲಿ ನೀರು ಬರುತ್ತಿತ್ತು. ಎಲ್ಲಿ ಅಳುತ್ತಿದ್ದಾಳೋ ಅಂತ ಒಂದು ಕ್ಷಣ ಭಾಸವಾದರೂ ತಕ್ಷಣ ಅವಳು ಏನಾದರೂ ಹೇಳಿ ನಕ್ಕಾಗ ನೆಮ್ಮದಿ ಅನಿಸುತ್ತಿತ್ತು. ಗಾಣಗಾಪುರವಾದ್ದರಿಂದ ಆಗಾಗ ಉತ್ಸವದ ಸ್ಪೀಕರುಗಳಿಂದ 'ದತ್ತ ದಿಗಂಬರ ದೈವತ ಮಾಝೆ...'

*PAGE DONATED BY : **SHRI ANANT GANESH BHAT, BANDRA & FAMILY***

ಭಜನೆ ತೇಲಿ ಬಂದಾಗ ದಿಗ್ಯಾನ ಕಡೆ ನೋಡಿ ತುಂಬಾ ಚಂದವಾಗಿ ನಗುತ್ತಿದ್ದಳು. ಅವನಿಗೆ ಆಗ ಸುಮಾರಾಗುತ್ತಿತ್ತು. 'ನನ್ನ ಪಾಲಿಗೆ ಈ ದಿಗಂಬರ ದೈವತ ಬಂದಿದೆ' ಎನ್ನುವ ಅಕ್ಕರೆ. ಗೇಲಿ ಎಲ್ಲ ಬೆರೆತ ನೋಟ ಅದು ಅನಿಸುತ್ತಿತ್ತು.

ಸಂಜೆ ಅಪ್ಪ ಮಗ ವಾಪಸು ಬರುವಾಗ ಮತ್ತೆ ಸೇತುವೆ ಬಳಿ ಇಳಿದು ಕಟಾಂಜನಕ್ಕೆ ಕೈಯೂರಿ ಭೀಮಾ ನದಿಯನ್ನು ನೋಡುತ್ತಿದ್ದರು. ನದಿಯ ನಿತಾಂತ ಹರಿವಿನ ಕಲಕಲದಲ್ಲಿ ಇಬ್ಬರಿಗೂ ಚಂದಾ ತೋರುತ್ತಿದ್ದಳು. 'ಈ ಭೀಮಾ ನದಿಯೂ ಪಂಢರಪುರದಿಂದಲೇ ಬಂದಿದೆ. ಅಲ್ಲಿ ಅದರ ಹೆಸರು ಏನು ಹೇಳು?' ಎಂದು ಅಪ್ಪ, ಮಗನನ್ನು ಮುದ್ದಿನ ಚಿತಾವಣೆಯಲ್ಲಿ ಕೇಳುತ್ತಾನೆ. ಉತ್ತರ ಗೊತ್ತಿದ್ದೂ ಬೇಕೆಂತಲೇ ತಡಮಾಡುವವನಂತೆ ಹಸ್ತಾಕ್ಷರ. 'ಹೇಳಲಾ, ಹೇಳಲಾ' ಎಂದು 'ಚಂದ್ರಭಾಗಾ' ಎಂದು ಆಯಿಯನ್ನೇ ಕರೆಯುವಂತೆ ಹೇಳುತ್ತಾನೆ. ಆ ಕ್ಷಣದಲ್ಲೇ ಇಬ್ಬರಿಗೂ ನದಿ ಅವಳಿಂದಲೇ ಪ್ರವಹಿಸಿ ಬರುವ ಸೌಖ್ಯದ ರೂಪವೆಂಬಂತೆ ಭಾಸವಾಗಿ ಪರಸ್ಪರ ಸಾಂತ್ವನದ ಮೂಕಭಾವವೊಂದು ಉಕ್ಕುತ್ತದೆ...ಹೀಗೆ ಈ ಜುಳು ಜುಳು ಸಂಪನ್ನ ನದಿ ಚಂದಾಳನ್ನು ಇವರೊಂದಿಗೆ, ಈ ಆವರಣದೊಂದಿಗೆ ಸೂಕ್ಷ್ಮ ಸಂಪರ್ಕದಲ್ಲಿ ಇರಿಸುತ್ತದೆ...ಹಳದಿ ಚುಂಚಿನ ಬೆಳ್ಳಕ್ಕಿಗಳೂ ಪಂಢರಪುರಕ್ಕೇ ವಲಸೆ ಹೋಗಿರಬಹುದು ಅನಿಸುತ್ತದೆ...

*(ಮುಂದುವರಿಯುವುದು)*

(ಸೌಜನ್ಯ : ಅನಾರಕಲಿಯ ಸೇಫ್ಟಿಪಿನ್)

UGRU INDUSTRIES

*With Best Compliments from*

**UGRU INDUSTRIES**

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

ADVT.



# Matter of Questions

✍ **L. V. Shastri, Bangalore**

I recall, with a sense of amusement, a song in a Bollywood film of my college days. Hero sings to heroine: 'I ask a question. You in turn ask a question, may a counter question to a question be the answer to each question'. Students of Sanskrit literature would cite many such compositions where question and answer are cleverly and subtly blended.

There hardly would be a day where questions are not tossed around among individuals. It may be among members of well knit families, friends, colleagues at work place and so on. More often than not, the questions pertain to practical aspects of daily living. Yet, there would be engagements well beyond personal considerations of profit or loss. If a question is asked to a maestro in fields like music, dance, sports etc.: 'what made you take up your vocation?' the answer might well be: 'Oh! Just the love for it'. It is said that Tensing , the mountaineer, was once asked 'why do you want to scale the Everest?' and his answer was: 'because it is there!'

